Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆ: ಸಿ.ಸಿಃ 413/2017**

| ದಿನಾಂಕ 24.03.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | | |
|---|---|---|---|
| **C.W.** | **9** | **P.W.** | **2** |
| **ಹೆಸರು** | ಸಿ.ಆರ್.ಭಾಸ್ಕರ್ | | |
| **ತಂದೆಯ/ಗಂಡನ ಹೆಸರು** | ರಂಗದಾಸಪ್ಪ | | |
| **ವಯಸ್ಸು** | 50 | | |
| **ಉದ್ಯೋಗ** | ಗುಪ್ತಚರ ಅಧಿಕಾರಿ, ತುಮಕೂರು ಘಟಕ | | |
| **ವಾಸ** | ತುಮಕೂರು | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. ನಾನು ಶಿರಾ ನಗರ ಠಾಣೆಯಲ್ಲಿ 2015 ರಿಂದ ಜನವರಿ - 2018 ರವರೆಗೂ ಎ.ಎಸ್.ಐ ಆಗಿ ಕೆಲಸ ನಿರ್ವಹಿಸಿರುತ್ತೇನೆ.
2. 29.12.2016 ರಂದು ಚಾ,ಸಾ. 8 ರವರಿಂದ ಕೇಸಿನ ಕಡತವನ್ನು ಪಡೆದು ಪರಿಶೀಲಿಸಿದ್ದು, 1 ಮತ್ತು 2 ನೇ ಆರೋಪಿತರು ಸರ್ವೆ ನಂ. 12 ರ 28 ಗುಂಟೆ ಜಮೀನನ್ನು 1983 ನೇ ಸಾಲಿನಲ್ಲಿ ಹೆಚ್.ಎನ್.ನರಸಪ್ಪನಿಗೆ ಮಾರಾಟ ಮಾಡಿದ್ದು, ನಂತರ ದಾಖಲಾತಿಗಳನ್ನು ಬದಲಾವಣೆ ಮಾಡಿ, 06.05.1992 ರಂದು 3 ನೇ ಆರೋಪಿ ರವರಿಗೆ ನಕಲು ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದು ದೃಢಪಟ್ಟಿರುತ್ತದೆ ಆರೋಪಿಗಳು ಪತ್ತೆಯಾಗದೇ ಇದ್ದು, 3 ನೇ ಆರೋಪಿಗೆ ಈಗಾಗಲೇ 86 ವರ್ಷ ವಯಸ್ಸಾದ ಕಾರಣ ಅವರನ್ನು ಬಂಧನ ಮಾಡಿರುವುದಿಲ್ಲ, 2 ನೇ ಆರೋಪಿಯು ಮಹಿಳೆಯಾದ ಕಾರಣ ಆಕೆಯನ್ನು ಸಹ ಬಂಧನ ಮಾಡಿರುವುದಿಲ್ಲ. 22.02.2017, 16.03.2017, 12.05.2017 ದಿನಾಂಕಗಳಂದು 1 ನೇ ಆರೋಪಿಯು ಪತ್ತೆಯಾಗಿರುವುದಿಲ್ಲ, 30.06.2017 ರಂದು 1 ರಿಂದ 3 ನೇ ಆರೋಪಿಗಳ ಆರೋಪ ದೃಢಪಟ್ಟ ಮೇರೆಗೆ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ- 1 ಮತ್ತು 2 ನೇ ಆರೋಪಿ ಪರ ಶ್ರೀ ಡಿ.ಕೆ. ವಕೀಲರಿಂದಃ**

1. 29.12.2016 ರಂದು ಚಾ,ಸಾ. 8 ರವರಿಂದ ಯಾವುದೇ ಕಡತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಗೆ ಯಾವುದೇ ನೊಂದಣಿ ಕ್ರಯ ಪತ್ರವನ್ನು 1 ಮತ್ತು 2 ನೇ ಆರೋಪಿತರು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಪತ್ತೆಗಾಗಿ ಯಾವುದೇ ಅಧಿಕಾರಿಗಳನ್ನು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ.5 ರಿಂದ 8 ರವರು ನಿಮ್ಮ ಅಧೀನದಲ್ಲಿ ಕೆಲಸ ಮಾಡುವ ನೌಕರರು ಎಂದರೆ ಸರಿಯಲ್ಲ. 1 ನೇ ಆರೋಪಿಯ ಪತ್ತೆಗಾಗಿ ದಾಖಲಾತಿಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ವಿರುದ್ಧ ಯಾವುದೇ ಆರೋಪ ಪತ್ತೆಯಾಗದೇ ಇದ್ದರೂ ಸಹ ಸುಳ್ಳು ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ. 8 ರವರಿಂದ ಕಡತವನ್ನು ಪರಿಶೀಲನೆಗೆ ತೆಗೆದುಕೊಂಡಿರುವ ವಿಚಾರವನ್ನು ಕೂಲಂಕುಶವಾಗಿ ನಾನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
2. ಮೇಲಿನ ಪಾಟೀಸವಾಲನ್ನು ಹೆಚ್.ಬಿ.ವಿ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಪಾಟೀಸವಾಲುಃ- 3 ನೇ ಆರೋಪಿ ಪರ ಶ್ರೀ ಡಿ.ಕೆ. ವಕೀಲರಿಂದಃ**

3. ಸಬ್ ರಿಜಿಸ್ಟ್ರಾರ್ ಕಛೇರಿಗೆ ವಹಿವಾಟು ಆಗಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲನೆ ಬಗ್ಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ. ಅದೇ ರೀತಿ ತಹಶೀಲ್ದಾರರು ಮತ್ತು ಕಂದಾಯ ಇಲಾಖೆಯವರಿಗೂ ಸಹ ಅರ್ಜಿಯನ್ನು ಕೊಟ್ಟಿಲ್ಲ. ಆರೋಪಿತರಿಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೊಟೀಸನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೋಷಾರೋಪಣ ಪತ್ರದಲ್ಲಿ ಯಾವುದೇ ನೋಟರಿ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವು ಸಿವಿಲ್ ಪ್ರಕರಣವಾಗಿದ್ದು, ಯಾವುದೇ ತನಿಖೆಯನ್ನು ಮಾಡದೇ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**